ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 4, Jan-Feb 2020, 23-25
©*IIMRD*, Mysuru
IIMRD JOURNALS
www.iimrd.com

# ಐತಿಹಾಸಿಕ ಪ್ರವಾಸಿ ತಾಣವಾಗಿ ನೆಲಮಂಗಲ ತಾಲೂಕಿನ ಶಿವಗಂಗೆ: ಒಂದು ಅಧ್ಯಯನ

**ಸೂರ್ಯ ನಾರಾಯಣ ಎನ್**[1]

**ಪೀಠಿಕೆ**

ಜಗತ್ತಿನ ಅಪರೂಪದ ಸ್ಥಳಗಳಲ್ಲಿ ಒಂದಾದ ಶಿವಗಂಗೆಯು ಕರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿನಿಂದ 54 ಕಿ.ಮೀ ಅಂತರದಲ್ಲಿ ಹಾಗೂ ತಾಲೂಕು ಕೇಂದ್ರವಾದ ನೆಲಮಂಗಲದಿಂದ 25 ಕಿ.ಮೀ ದೂರದಲ್ಲಿದೆ. ಶಿವಗಂಗೆಯು ಸಮುದ್ರಮಟ್ಟದಿಂದ 4,547 ಅಡಿ ಎತ್ತರದಲ್ಲಿದೆ. ಮೂಡಣದಿಂದ ವೃಷಭನಂತೆ, ಪಡುವಣದಿಂದ ಗಣೇಶನಂತೆ, ತೆಂಕಣದಿಂದ ಸರ್ಪದಂತೆ, ಬಡಗಣದಿಂದ ಲಿಂಗದಂತೆ ಕಾಣುವ ಬೆಟ್ಟ ನೂರಾರು ವಿಶೇಷತೆ ಹಾಗೂ ಅಚ್ಚರಿಗಳನ್ನು ಒಳಗೊಂಡಿದೆ.

ಕಕುದ್ಗಿರಿಯ ಪುರಾಣದ ಪ್ರಕಾರ ನಂದಿಯ ಶಾಪಕ್ಕೆ ಒಳಗಾಗಿದ್ದಾಗ ಶಿವನಿಗೆ ಮುಖ ತೋರಿಸಲು ನಾಚಿಕೆಯಾಗಿ ನೆಲಕ್ಕೆ ಬೆನ್ನು ಮಾಡಿ ಕಾಲು ಆಕಾಶದಕಡೆ ಮಾಡಿತಪಸ್ಸು ಮಾಡುತ್ತಾನೆ. ತಪಸ್ಸನ್ನು ಮೆಚ್ಚಿದ ಶಿವ ಈ ಜಾಗ ಪುಣ್ಯಕ್ಷೇತ್ರವಾಗಲಿ, ಈ ಸ್ಥಳ ಕಕುದ್ಗುರಿಯಾಗಿ ಪ್ರಸಿದ್ಧವಾಗಲಿ ಎಂಬ ವರಕೊಟ್ಟನಂತೆ, ನಂದಿಯ ತಪಸ್ಸಿನಿಂದ ಕಕುದ್ಗಿರಿ ಶಿವಗಂಗಾ ಕ್ಷೇತ್ರವಾಗಿದೆ ಎಂಬ ಪುರಾಣವಿದೆ.

**ಗಿರಿಜಾ ಕಲ್ಯಾಣ/ತೀರ್ಥೋದ್ಭವ :** ಶಿವಪಾರ್ವತಿಯರಿಗೆ ಕೈಲಾಸದಲ್ಲಿ ಗಿರಿಜಾ ಕಲ್ಯಾಣ ನಡೆಯುವ ಸಂದರ್ಭದಲ್ಲಿ ಋಷಿಮುನಿಗಳು, ದೇವಾನು ದೇವತೆಗಳು ಹಿಮಾಲಯದ ಕಡೆ ಧಾವಿಸಿದಾಗ ಭೂಮಿಯ ಸಮತೂಕ ಪಲ್ಲಟಗೊಳ್ಳುವುದನ್ನು ಕಂಡ ಶಿವ ಅಗಸ್ತ್ಯಮುನಿಯನ್ನು ದಕ್ಷಿಣಕ್ಕೆ ಕಳುಹಿಸುತ್ತಾರೆ. ಆಗ ಭೂಮಿ ಸಮತೂಕ ಹೊಂದುತ್ತದೆ. ಅಗಸ್ತ್ಯ ಋಷಿ ಗಿರಿಜಾ ಕಲ್ಯಾಣ ನೋಡುವ ಭಾಗ್ಯ ಕಳೆದುಕೊಂಡೆ ಎಂದಾಗ ಶಿವ ಅಗಸ್ತ್ಯ ಋಷಿಗಾಗಿ ಶಿವಗಂಗೆಯಲ್ಲಿ ಗಂಗಾಧರೇಶ್ವರನಾಗಿ ನೆಲೆನಿಂತು ಗಿರಿಜಾಕಲ್ಯಾಣ ನಡೆಯಲು ಅವಕಾಶ ಮಾಡಿದರು ಎಂಬ ಪುರಾಣ ಜನಮಾನಸದಲ್ಲಿದೆ.

ಪ್ರತಿ ವರ್ಷ ಮಕರ ಸಂಕ್ರಾಂತಿಯಂದು ತೀರ್ಥೋದ್ಭವವಾಗುವುದು ಆ ಪವಿತ್ರ ತೀರ್ಥವನ್ನು ಗಿರಿಜಾಕಲ್ಯಾಣ ಮಹೋತ್ಸವಕ್ಕೆ ಬಳಸುತ್ತಾರೆ. ಇದರ ಉಲ್ಲೇಖವು ಕ್ರಿ.ಶ 1234ರ ತುಮಕೂರು ಜಿಲ್ಲೆಯ ಹೊನ್ನುಡಿಕೆ ಹೋಬಳಿಯ ಮುಳುಕುಂಟೆ ಅಗ್ರಹಾರದಲ್ಲಿ ದೊರೆತ ತಾಮ್ರಶಾಸನದಲ್ಲಿದೆ.

ಕಾಕತೀಯ ಪ್ರತಾಪ ರುದ್ರನು ತೀರ್ಥಯಾತ್ರೆ ಮಾಡುತ್ತಾ ಶಿವಗಂಗೆಗೆ ಬಂದಿದ್ದು ಆ ದಿನ ಸೂರ್ಯನು ಮಕರರಾಶಿಗೆ ಚಲಿಸಿದ ವಿಚಾರವನ್ನು ಹಾಗೂ ಬೆಟ್ಟದ ಮೇಲೆ ಗಂಗೋತ್ಪತ್ತಿ ಆದದ್ದನ್ನು ಈ

[1] *ಸಂಶೋಧನಾ ವಿದ್ಯಾರ್ಥಿ, ಇತಿಹಾಸ ಮತ್ತು ಪುರಾತತ್ವ ಸಂಶೋಧನಾ ಮತ್ತು ಅಧ್ಯಯನ ವಿಭಾಗ, ತುಮಕೂರು ವಿಶ್ವವಿದ್ಯಾಲಯ, ತುಮಕೂರು*

ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದರೊಂದಿಗೆ ಪ್ರತಾಪರುದ್ರನು ಗಿರಿಜಾಕಲ್ಯಾಣದ ಸುಮಹೋತ್ಸವದಲ್ಲಿ ಪಾಲ್ಗೊಂಡಿದ್ದಾಗಿಯೂ ಕೂಡ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಈ ಶಾಸನ ಮಾತ್ರವಲ್ಲದೆ 'ಶಿವಗಂಗಾ ಮಠದ ಐತಿಹಾಸಿಕ ದಾಖಲೆಗಳು' ಎಂಬ ಕೃತಿಯಲ್ಲಿ ನಮೂದಾಗಿರುವ ಹಲವು ಪತ್ರಗಳಲ್ಲಿ ಶಿವಗಂಗೆಯ ತೀರ್ಥಪ್ರಸಾದವು ಮೈಸೂರು ಮಹಾರಾಜರಿಗೆ ತಲುಪಿದ ಬಗ್ಗೆ ವಿವರಗಳಿವೆ. ಆಗಿನ ಮೈಸೂರು ದೊರೆಗಳಾಗಿದ್ದ ಕೃಷ್ಣರಾಜ ಒಡೆಯರ್‌ರವರಿಗೆ ಅಭಿನವ ಸಚ್ಚಿದಾನಂದ ಭಾರತಿಯವರು ಆಗಿನ ಕಾಲಕ್ಕೆ ಸಾವಿರ ರೂಪಾಯಿ ಬೆಲೆ ಬಾಳುವ ಶಾಲು ಜೋಡಿಯ ಜೊತೆಗೆ ಸ್ವಾಮಿಗಳ ಶ್ರೀಮುಖ, ಗಂಗಾತೀರ್ಥ, ಪ್ರಸಾದ ವಿಭೂತಿ, ಫಲ ಮಂತ್ರಾಕ್ಷತೆಗಳನ್ನು ಶ್ರೀ ಮಠದಿಂದ ಅರ್ಚಕ ಹೊನ್ನಿಭಟ್ಟ, ಮಠದ ಗೋಪಾಲಶಾಸ್ತ್ರಿ ಎಂಬ ಬ್ರಾಹ್ಮಣರು ಮೈಸೂರು ಅರಮನೆಗೆ ಕೊಂಡೊಯ್ದಿದ್ದಾಗಿ ಮಾರ್ಚ್ 21, 1816ರ ಪತ್ರವೊಂದರ ಟಿಪ್ಪಣಿಯಿಂದ ತಿಳಿಯುತ್ತದೆ. ಶ್ರೀ ಮಠದಲ್ಲಿ ಅಭಿನವ ಸಚ್ಚಿದಾನಂದ ಭಾರತಿ ಸ್ವಾಮಿಗಳು ಸನ್ಯಾಸ ಪೀಠ ವಹಿಸಿದ್ದ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಶ್ರೀಮಠಕ್ಕೆ ಭೇಟಿ ನೀಡಿ ಶ್ರೀ ಕ್ಷೇತ್ರದ ದೇವಾನುದೇವತೆಗಳ ದರ್ಶನ ಭಾಗ್ಯ ಪಡೆದಿದ್ದರೆಂಬ ವಿಚಾರವನ್ನು ಪತ್ರವೊಂದರ ಟಿಪ್ಪಣಿ ತಿಳಿಸುತ್ತದೆ.

ಗುಬ್ಬಿ ಮಲ್ಲಣಾರ್ಯ ವಿರಚಿತ 'ವೀರಶೈವಾಮೃತಪುರಾಣ' ಕೃತಿಯಲ್ಲಿ ಶಿವಗಂಗೆಯ ತೀರ್ಥೋದ್ಭವದ ಉಲ್ಲೇಖವಿದೆ ಎಂಬುದನ್ನು ನಂಜುಂಡಸ್ವಾಮಿಯವರು ತಿಳಿಸಿದ್ದಾರೆ.

ಶಿವಗಂಗೆಯ ಬೆಟ್ಟದ ಮೇಲೆ ಗಂಗೋತ್ಪತ್ತಿಯಾಗುವುದಕ್ಕೆ ಕಾರಣವಾಗಿರುವುದು ಸೂರ್ಯನು ಬದಲಿಸುವ ಪಥದ ಕಿರಣ ಎಂಬುದು ಇತಿಹಾಸತಜ್ಞರ ಮಾತು. ಈ ರೀತಿ ಆಸ್ಟ್ರೇಲಿಯಾ ಮತ್ತು ಆಫ್ರಿಕಾದ ಎರಡು ಜಾಗದಲ್ಲಿ ನಡೆದಿದೆ ಎಂಬ ದಾಖಲೆಯಿದೆ. ಶಿವಗಂಗೆಯಲ್ಲಿ ಮಾತ್ರ ಗಂಗೋತ್ಪತ್ತಿಯಾಗುವ ಪ್ರಕೃತಿ ವಿಸ್ಮಯ ಕಾಣಬಹುದು. ಶಿವರಾತ್ರಿಯ ದಿನ ಗಂಗಾಧರೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ಐತಿಹಾಸಿಕ, ಪುರಾಣ ಪ್ರಸಿದ್ಧಿ ಪಡೆದಿರುವ ಶಿವಗಂಗೆ ಕ್ಷೇತ್ರವನ್ನು ವಿಜಯನಗರದ ಅರಸರು, ಬೆಂಗಳೂರು ನಿರ್ಮಾತೃ ಕೆಂಪೇಗೌಡರು, ಗಂಗರು, ಮೈಸೂರು ಅರಸರು ಆಳ್ವಿಕೆ ಮಾಡುವುದರ ಜೊತೆಗೆ ಜೀರ್ಣೋದ್ಧಾರ ಮಾಡಿರುವುದನ್ನು ಕಾಣಬಹುದಾಗಿದೆ. ಶಿವಗಂಗೆ ಬೆಟ್ಟದ ಸುತ್ತಮುತ್ತ 64 ವೀರಶೈವ ಮಠಗಳಿದ್ದು, ಬೆಟ್ಟದ ಉತ್ತರ ಭಾಗದಲ್ಲಿ ಒಂದು ಚಿಕ್ಕ ವಿಷ್ಣು ದೇವಾಲಯ ಕಂಡುಬಂದಿದೆ.[1] ಈ ವಿಷ್ಣು ದೇವಾಲಯವು ತುಂಬಾ ಚಿಕ್ಕದಾಗಿದ್ದು ಹೊರಗಡೆ ಮಂಟಪ ಇತ್ಯಾದಿ ಅಲಂಕಾರಗಳೇನು ಇಲ್ಲ. ಒಳಗಡೆ ಎಡಭಾಗಕ್ಕೆ ಒಂದು ವಿಷ್ಣು ಶಿಲ್ಪವಿದೆ. ಈ ಶಿಲ್ಪವನ್ನು ಸ್ವರೂಪದಿಂದ 17–18ನೇ ಶತಮಾನದ್ದೆಂದು ಹೇಳಬಹುದು. ಈ ದೇವಾಲಯದ ಮುಂದೆ ಕಲ್ಯಾಣಿಯಿದ್ದು ಈಗ ಹಾಳಾಗಿದೆ. ಶಿವಗಂಗೆ ಕ್ಷೇತ್ರದ ಸಮೀಪದಲ್ಲಿ ದೊರೆತಿರುವ ಹೊಯ್ಸಳರ ಕಾಲದ ಶಾಸನದಲ್ಲಿ ವಿಷ್ಣುವರ್ದನ ಶಿವಗಂಗೆಯ ಹತ್ತಿರವಿರುವ ಮಾಗಡಿ ತಾಲೂಕಿಗೆ ಸೇರಿದ ಬಿಟ್ಟಸಂದ್ರ ಗ್ರಾಮದಲ್ಲಿ ಬ್ರಹ್ಮಸಮುದ್ರ ಮತ್ತು ವಿಷ್ಣು ದೇವಾಲಯಗಳನ್ನು ಮಾಡಿಸಿದ್ದನ್ನು ಪ್ರಸ್ತಾಪಿಸಿದೆ. ಶಿವಗಂಗೆಯಂತಹ ಪ್ರಮುಖ ಶೈವ ಕ್ಷೇತ್ರದಲ್ಲಿ ವಿಷ್ಣು ದೇವಾಲಯವಿದ್ದರೂ

[1] ನಂಜುಂಡಸ್ವಾಮಿ ಮತ್ತು ರಾಜಶೇಖರಪ್ಪರವರು ಶಿವಗಂಗೆ ಸಮ್ಮೇಳನದಲ್ಲಿ ನೀಡಿದ ಮಾಹಿತಿ.

ಅದು ಪ್ರಾಮುಖ್ಯತೆ ಪಡೆಯಲಿಲ್ಲವೆಂದು ಹೇಳಬಹುದು. ಇದಕ್ಕೆ ಹಲವಾರು ಅಂಶಗಳು ಕಾರಣವಾಗಿದ್ದು, ಪ್ರಮುಖವಾಗಿ ಈ ಪ್ರದೇಶದಲ್ಲಿ ಶೈವಧರ್ಮವು ಪ್ರಾಮುಖ್ಯತೆಯನ್ನು ಪಡೆದುಕೊಂಡಿತ್ತು. ಅಲ್ಲದೇ ಈ ದೇವಾಲಯ ತುಂಬಾ ಚಿಕ್ಕದಾಗಿದ್ದು ಬೆಟ್ಟದ ಸಣ್ಣಭಾಗದಲ್ಲಿದ್ದು, ದೇವಾಲಯದ ಒಳಗೆ ನೇರವಾಗಿ ಶಿಲ್ಪವನ್ನು ಪ್ರತಿಷ್ಠಾಪಿಸಿಲ್ಲದಿರುವುದು ಮತ್ತು ಮುಖ್ಯದ್ವಾರದ ಎಡ ಭಾಗದಲ್ಲಿ ಪ್ರತಿಷ್ಠಾಪಿಸಲಾಗಿರುವುದು ಕಾರಣವಾಗಿದೆ.

ಪ್ರಸ್ತುತ ಕೆಲವೇ ಕೆಲವು ಪರಂಪರೆಯ ಮಠಗಳು ಉಳಿದಿವೆ. ಈ ಉಳಿದಿರುವ ಮಠಗಳೆಲ್ಲಾ ಪೂಜೆ ಪ್ರಸಾದ ವ್ಯವಸ್ಥೆಗೆ ಹೆಸರುವಾಸಿಯಾಗಿದೆ. ಯಾರೇ ಭಕ್ತರೂ, ಪ್ರವಾಸಿಗರು, ಯಾತ್ರಿಕರು ಮಠಕ್ಕೆ ದಯ ಮಾಡಿಸಿದರೂ ಪ್ರಸಾದ ಸ್ವೀಕರಿಸದೆ ವಾಪಾಸು ತೆರಳುವುದಿಲ್ಲ. ಈ ರೀತಿಯಾಗಿ ತಮ್ಮ ಹಸಿವನ್ನು ನೀಗಿಸಿಕೊಂಡು ಸಂತೃಪ್ತರಾಗುತ್ತಾರೆ. ಅದೇರೀತಿ ಶಿವಗಂಗೆ ಬೆಟ್ಟವನ್ನು ನೋಡಲು ಪ್ರತಿನಿತ್ಯ ಸಾವಿರಾರು ಪ್ರವಾಸಿಗರು, ಭಕ್ತಾದಿಗಳು ಬರುತ್ತಾರೆ. ಬರುವ ಪ್ರವಾಸಿಗರಿಗೆ, ಭಕ್ತಾದಿಗಳಿಗೆ ಶಿವಗಂಗೆಯಲ್ಲಿ ಸೂಕ್ತವಾದ ಸ್ವಚ್ಛವಾದ ಪ್ರಸಾದದ ವ್ಯವಸ್ಥೆಯನ್ನು ಮಾಡಿರುವುದನ್ನು ಕಾಣಬಹುದಾಗಿದೆ. ಒಟ್ಟಾರೆ ಹೇಳಬಹುದಾದರೆ ಶಿವಗಂಗೆ ಬೆಟ್ಟವು ಪ್ರಮುಖ ಪ್ರವಾಸಿ ತಾಣವಾಗಿರುವುದರ ಜೊತೆಗೆ ಐತಿಹಾಸಿಕ ಸಂಶೋಧನಕಾರರಿಗೆ ಸಾಕಷ್ಟು ಮಾಹಿತಿಯನ್ನು ಒದಗಿಸುವ ಪ್ರದೇಶವಾಗಿದೆ ಎಂದರೆ ತಪ್ಪಾಗಲಾರದು.

**ಪರಾಮರ್ಶನ ಗ್ರಂಥಗಳು:**

- ಇತಿಹಾಸ ದರ್ಶನ– ಸಂಪಾದನೆ. (2011). ಇತಿಹಾಸ ಅಕಾಡೆಮಿ, ಬೆಂಗಳೂರು
- ಇತಿಹಾಸ ದರ್ಶನ–ಸಂಪಾದನೆ (2010). ಇತಿಹಾಸ ಅಕಾಡೆಮಿ, ಬೆಂಗಳೂರು
- ಕನ್ನಡ ಪ್ರಭ (ದಿನಪತ್ರಿಕೆ), ಫೆಬ್ರುವರಿ 28, 2017.
- ಲೂಯಿಸ್ ರೈಸ್, ಬಿ. (ಸಂ) (1904). ತುಮಕೂರು ಜಿಲ್ಲೆಯ ಶಾಸನಗಳು. ಎಪಿಗ್ರಾಫಿಯಾಕರ್ನಾಟಿಕಾ, ಸಂ–12.
- ಸೂರ್ಯನಾಥ ಕಾಮತ್ (ಸಂ). ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಆಂಗ್ಲ ಸಂಪುಟ), ಕರ್ನಾಟಕ ಸರ್ಕಾರ, ಬೆಂಗಳೂರು.
- ಶ್ರೀ ಸಿದ್ದಗಂಗಯ್ಯ ಕಂಬಾಳು. (ಸಂ). ಶ್ರೀ ಶಿವಗಂಗಾ ಕ್ಷೇತ್ರದ ಐತಿಹಾಸಿಕ ದಾಖಲೆಗಳು. ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಪುಟ 4,